ಶ್ರೀಃ

ಜಗ್ಗು ಶಿಂಗರಯ್ಯಂಗಾರ್ಯರಿಂದ

ವಿರಚಿತವಾದ

# ಬರಲಿನ ಭಾಗ್ಯ

ಎಂಬ

## ಕನ್ನಡ ಪದ್ಯಗಳು

1954

ಕ್ರಯ ಒಂದಾಣೆ

# ಪುಡಿಮಾತು

ಸಂಪದಭಿವೃದ್ಧಿಗೆ ಕೀಳುಮಟ್ಟದ ಜನಗಳ (ಬಡ ನೌಕರರ) ವಿಷೇಷವಾದ ದುಡಿತವೇ ಮೂಲಕಾರಣ ವಾಗಿದ್ದರೂ ತಮ್ಮ ಶ್ರಮಕ್ಕೆ ತಕ್ಕ ಮನ್ನಣೆಯನ್ನಾಗಲೀ ಪ್ರೋತ್ಸಾಹವನ್ನಾಗಲೀ ಅವರು ಹೊಂದದೆ ಇರುವುದು ಲೋಕವಿದಿತವಾಗಿದೆ.

ಆದರೂ ಈ ಬಡಜನಗಳ ಆತ್ಮಗೌರವವೇ ಮೊದ ಲಾದ ಮನ್ನಣೆಯು ಅವರಿಗೆಂದಿಗೂ ಕುಂದಲಾರದು. ಆದುದರಿಂದ ಉನ್ನತ ಪದವಿಯಲ್ಲಿರುವರು ಬಡವರ ವಿಷಯದಲ್ಲಿ ತಕ್ಕ ಮರ್ಯಾದೆಯನ್ನು ತೋರಿಸುವುದು ಉಚಿತವೆಂದು ಸೂಚಿಸಲು 'ಬರಲಿನ ಭಾಗ್ಯ' ವೆಂಬ ಈ ಪದ್ಯಗಳು ಕಲ್ಪಿತವಾಗಿದೆ.

ಇದರಿಂದ ಇನ್ನು ಮುಂದಾದರೂ ಬಡವರು ತಮ್ಮ ಯೋಗ್ಯತೆಗೆ ತಕ್ಕ ಗೌರವವನ್ನು ಹೊಂದುವುದಾದರೆ ಈ ಸಣ್ಣ ಪದ್ಯರಚನೆಯ ಪ್ರಯೋಜನವು ಲಭಿಸಿ ತೆಂದು ಭಾವಿಸುತ್ತೇನೆ.

ಸಜ್ಜನ ವಿಧೇಯ - ಜಗ್ಗು ಶಿಂಗರಯ್ಯಂಗಾರ್
ಗ್ರಂಥಕರ್ತ

## ಬರಲಿನ ಭಾಗ್ಯ

# ಬರಲಿನ ಭಾಗ್ಯ

ಬರಲು ಬರಲೆಂದೆನುತ ಎಲ್ಲರು
ಬರಿದೆ ಜರೆವರು ಬರಲೇ ನಿನ್ನನು
ಇರಲು, ಕಸಗಳು ಮನೆಯೊಳೆಲ್ಲಿಯು
ಬರಲು ಬರಲಿಲ್ಲೆಂಬರದರಿಂ, ನೀನೆ ಮುಖ್ಯನಲ

ಬೆಳಕು ಹರಿಯುವ ವೇಳೆಗಾಗಲೆ
ಕೊಳಕು ಮನೆಯೊಳಗಿರಲು ಗುಡಿಸಲು
ಅಳುಕದೆಯೆ ಮಾನಿನಿಯರೆಲ್ಲರು
ಬಳಿಗೆಹುಡುಕುತಬಂದು ನಿನ್ನನು ಕರದಿ ಪಿಡಿಯುವರು

12

ರಾಜನರಮನೆ ಛತ್ರಗುರುಮಠ
ಪೂಜೆನಡೆಯುವ ದೇವಮಂದಿರ
ಜೂಜುಮನೆ ಬಡಜನರ ಗುಡಿಸಲು
ವಾಜಿಶಾಲೆಯು ಗೋಷ್ಠವೆಲ್ಲಿಯು ಬರಲೇ ನೀನಿರುವೆ

## ಬರಲಿನ ಭಾಗ್ಯ

ಗೌರವವ ತೋರದೆಯೆ ಯೆನ್ನನು
ದೂರಿ ದೂರದಿ ಮೂಲೆಗಿಡುವರು
ಯಾರು ಕೇಳುವರೆನ್ನನೆನ್ನದೆ
ಬೀರುತಿಹೆಯುಪಕೃತಿಯನೆಲ್ಲಡೆ ಸ್ವಾರ್ಥ ನಿನಗಿಲ್ಲ

ಕೀಳು ಮೇಲೆಂದೆಂಬ ಭೇದವ
ತಾಳದೆಯೆ ನೀನೆಲ್ಲ ಕಡೆಯೊಳು
ಧೂಳುಕಸಗಳ ಬಳಿವೆ ಗೃಹದೊಳು
ಬಾಳಲತಿ ಮುಖ್ಯತೆಯು ನಿನಗದೆ ನಿನ್ನ ಜರೆಯುವುದೆ

ಗಿರಿಯರಣ್ಯಗಳಲ್ಲಿ ಜನಿಸಿದ
ಪರಮ ಪಾವನ ಮೂರ್ತಿ ನೀನಲ
ಬರಲು, ಹಿಡಿಗಲು, ಪರಕೆಯೆಂಬೀ-
ತೆರದಿ ಪರಿಪರಿ ಹೆಸರ ಪಡೆದಿಹೆ ಕೊರತೆ ನಿನಗಿಹುದೆ?

ಕಾಲುಗಳು ನಿನಗಪರಿಮಿತವಿರೆ
ಮೂಲೆಯೊಳು ನೀನಡಗಿ ಕೇವಲ
ಬಾಲನಂದದಿ ಪರರು ನಡೆಸಲು
ಲೀಲೆಯಿಂದೋಡಾಡಿ ನೆಲದೊಳು ವಿಹರಿಸುತ್ತಿರುವೆ

# ಬರಲಿನ ಭಾಗ್ಯ

ಮದುವೆ ಮುಂಜಿಯು ಸಭೆಯ ಕಾರ್ಯಗ-
ಳೊದಗಲಾಕಡೆ ನೀನು ಎಲ್ಲೆಡೆ
ಮೊದಲು ಸಂಚರಿಸಿದರೆ ಶುದ್ಧಿಯು
ಅದಿರದಿರೆ ಜನ ಸೇರಲಾಸ್ಥಳ ಯೋಗ್ಯವೆನಿಸುವುದೆ?

ಇಷ್ಟರೆನಿಸಿದ ಕುವರರಿಗೆ ಮಿಗೆ
ದೃಷ್ಟಿದೋಷವು ಬರಲು ನಿನ್ನೊಳ-
ಗಿಷ್ಟು ಕಡ್ಡಿಯೆ ತೆಗೆದು ಹತ್ತಿಸೆ
ಕಷ್ಟ ಹರಿವುದು ನೀನು ಮಾಂತ್ರಿಕರೊಳಗೆ ಗಣ್ಯನಲ

ಭೂತ ಬೇತಾಳಗಳನಟ್ಟಲು
ಸೋತು ಮಾಂತ್ರಿಕರೆಲ್ಲ ಸೊರಗಲು
ಖ್ಯಾತಿ ಪಡೆದಿಹ ಬರಲೆ। ನಿನ್ನಯ
ಮಾತನೆತ್ತಲು ಓಡುತಿರುವುವು ನೀ ಸಮರ್ಥನಲ

# ಬರಲಿನ ಭಾಗ್ಯ

ಹಲ್ಲು ಚುಚ್ಚಲು ದೀಪ ಹತ್ತಿಸೆ
ನಲ್ಲೆಯರು ಎಲೆಗಳನು ಹೊಲಿಯಲು
ಮೆಲ್ಲನೌಷಧಿಗಳನು ಬಳಿಯಲು
ಫುಲ್ಲಮುಖಿಕಿಡೆ ತಿಲಕವಪ್ಪುದು ನಿನ್ನಯವಯವವು

ಸೂತಿಕಾಗೃಹದೆಡೆಯು ನಿನ್ನನು
ದೂತನಂದದಿ ಕಾವಲಿಡುವರು
ಶೀತಕಾಲದಿ ಸೌದೆ ನೆನೆದಿರ-
ಲಾತುರದಿ ಜಾಣೆಯರು ನಿನ್ನನು ಒಲೆಗೆ ಬಳಸುವರು

ಒಂದು ವಸ್ತುವಿನಂಶ ಕಳೆದೊಡೆ
ಕುಂದಿ ಅದು ಕೆಲಸಕ್ಕೆ ಬಾರದು
ಹೊಂದಿಕೊಂಡಿಹ ನಿನ್ನ ದೇಹದೊ-
ಳೊಂದು ಭಾಗವ ಕಳೆದರೂ ನೀಂ ಕೆಲಸವೆಸಗುತಿಹೆ

# ಬರಲಿನ ಭಾಗ್ಯ

ಜನಿಸುವಾಗಲೆ ಸರಳತೆಯು ನಿನ-
ಗನುಸರಿಸಿ ತಾನಾಗಿ ಬಂದಿರೆ
ಆನಿಬರೊಳು ನಿನ್ನವರ ಸಂಘದೊ-
ಳನವರತವೆಡೆಬಿಡದೆ ಕೂಡುತ ಹೊಂದಿಕೊಂಡಿರುವೆ

ಐಕಮತ್ಯವು ನಿನ್ನೊಳಡಗಿದೆ
ಲೋಕಕಿದ ತಿಳಿಯಿಸದೆ ದುಡಿಯುವೆ
ಸಾಕು ತನ್ನೊಳೆ ಗುಣವಿದೆನ್ನದೆ
ನೂಕಿ ಎಲ್ಲೆಡೆ ಚದುರಿದವುಗಳನೊಂದುಗೂಡಿಸುವೆ

ಕಾಳುಗಳ ಭಾಂಡದಲಿ ಹುರಿಯುವ
ವೇಳೆಯಲಿ ನಿನ್ನನು ಜನಗಳು
ಕೀಳುಮೇಲಾಗಿಸುತ ಬಳಸಲು
ತಾಳಿ ಬೆಂಕಿಯ ಹಬೆಯ ತಲೆಯಿಂ ಸೇವೆಸಲ್ಲಿಸುವೆ

# ಬರಲಿನ ಭಾಗ್ಯ

ಸೂಕ್ಷ್ಮ ಸೂಕ್ಷ್ಮಾಕಾರದಲ್ಲಿಹ
ರೂಕ್ಷತರ ಪಾದಾಗ್ರಗಳ ನೀಂ
ತೀಕ್ಷ್ಣಶಸ್ತ್ರಗಳಾಗಿ ಬಳಸುತ-
ಲಾಕ್ಷಣವೆ ಜನಕೆಲ್ಲ ತೋರುವೆ ನಿನ್ನ ಕೋಪವನು

ಏನು ಬಂದರು ಬರಲಿ ಯಾರಿಗು
ನಾನು ಬಗ್ಗುವುದಿಲ್ಲ ವೆನ್ನುವ
ಮಾನವರ ಹೆಮ್ಮೆಯನು ಮುರಿಯುವೆ
ನೀನು ಕೈಯಿಗೆ ಬರಲು ಹಿಡಿದಿರುವವರ ಬಗ್ಗಿಸುವೆ

ಅತಿಶಯದ ಸೇವೆಗಳನೀಪರಿ
ಪ್ರತಿಫಲವನಾಶಿಸದೆ ರಚಿಸಿಯು
ಮತಿಯೊಳಿಲ್ಲವು ಹೆಮ್ಮೆ ನಿನ್ನಯ
ವ್ರತವಿದತಿ ದುಷ್ಕರವು ಸುಜನರೊಳೆಣಿಕೆ ನಿನಗಿಹುದು

# ಬರಲಿನ ಭಾಗ್ಯ

ಉಡಲು ವಸನವಿಡಲು ವೊಡವೆಯ-
ನೊಡಲ ಹೊರೆಯಲು ತಿಂಡಿಯಿವುಗಳ
ಕೊಡಿರಿಯೆನ್ನದೆಯಿರುವೆಯಾದರು
ಬಿಡದೆಯುಡುದಾರವನು ಬಯಸುವೆ ನಿನಗದತಿಮುಖ್ಯ

ಮೊರವು ಮೋಹದ ಮಡದಿ ನಿನಗೆಲೆ
ಬೆರೆತು ನೀನವಳೊಡನೆ ಸುಖಿಸುವೆ
ತಿರುಗಿ ತಂದುದನೆಲ್ಲ ಕೂಡಿಸಿ
ತೆರುವೆ ನಿರ್ವಂಚನೆಯಲವಳಿಗೆ ನೀನೆ ಕಾಮುಕನೈ

ಭೋಗಿಯೋ ನೀಂ ಪರಮ ಯೋಗಿಯೋ
ಹೇಗೆ ಹೇಳಲಿ ಬರಲೆ ನಿನಗನು-
ರಾಗ ಮೊರದೊಳಗಿಹುದು ಹೀಗಿರೆ
ಯೋಗಿಯಂದದಿ ಬಯಸದೊಂದನು ಮರೆಯೊಳಡಗಿರುವೆ

# ಬರಲಿನ ಭಾಗ್ಯ

ಜಗಳ ಮನೆಯೊಳು ಮಿತಿಯ ಮೀರಲು
ಸಿಗುವುದೈ ನಿನಗಲ್ಲಿ ಪೂಜೆಯು
ಮೃಗವಿಲೋಚನೆಯರ ಕರಾಂಬುಜ
ಹಗಲಿರುಳು ಹಿಡಿಯುವುದು ನಿನ್ನನು ನೀನೆ ಸುಕೃತಿಯಲ

ಎಸಗಿದುಪಕಾರಗಳ ನೆನೆಯದೆ
ಕಸಪರಕೆಯೆಂದೆನುತ ನಿನ್ನನು
ಬಿಸುಟರೂ ಬಸವಳಿಯದಿರು ನೀಂ
ಜಸವು ನಿನಗಿದೆ ಜಗದಿ ಸೇವಾನಿರತನೆನ್ನುವುದು

ಹೆಚ್ಚು ಮಾತುಗಳಾಡಿ ಫಲವೇ–
ನುಚ್ಚತರ ಸುಗುಣಗಳ ಖನಿ ನೀಂ
ನಿಚ್ಚಲುಂ ಮಿಗೆ ನಿನ್ನಯುಪಕೃತಿ
ಅಚ್ಚರಿಯು ಬಲುಕಡಿಮೆ ವೆಚ್ಚಕೆ ದೊರೆವೆಯೆಲ್ಲರಿಗು

# ಬರಲಿನ ಭಾಗ್ಯ

ನಿನ್ನ ಸದ್ಗುಣಗಳನು ಜನಗಳು
ಮನ್ನಿಸುತಲನುಸರಿಸಿ ನಡೆಸಲು
ಇನ್ನು ಜಗದೊಳು ಬೆಳಗದಿರುವುವೆ?
ಉನ್ನತದ ಸೌಜನ್ಯ ಪರಹಿತ ಸತ್ಯಧರ್ಮಗಳು

ಬಿಡದೆ ಬರಲಿನ ಭಾಗ್ಯವೆಂಬೀ
ನುಡಿಯ ಪುಸ್ತಕವನ್ನು ಮನೆಯೊಳ-
ಗಿಡಿರಿ ಬರಲನು ಬಳಸದವರುಳಿ-
ದೊಡನೆ ಮಿಕ್ಕವರೆಲ್ಲರಿದು ಬಲು ಮುಖ್ಯವೆಂದೆಣಿಸಿ

ರಚಿಸಿದವರು : ಶ್ರೀ ಜಗ್ಗು ಶಿಂಗ್ರೈಯ್ಯಂಗಾರ್